ಇನಾಮ್
ಅವರ ಎರಡು ಕವಿತೆಗಳು

## ನದಿಯ ನೆರಳು

ಹೇಳಿ
ಹೇಗೆ ಅಸುನೀಗುತ್ತಾರೆ ಮಕ್ಕಳು?
ಅವರು ಬದುಕಿಗೆ ಮರಳುವಾಗ ಸಾಯುತ್ತಾರೆ
ಹನಿ ನೀರು ಹೀರುವ ಮೊದಲೇ
ಬಾಯಾರಿಕೆಯತ್ತ ಮುಗುಳ್ನಗು ಬೀರುತ್ತಾ
ಅವರು ಕೊನೆಯುಸಿರೆಳೆಯುತ್ತಾರೆ,
(ನೀವು ಈಗಾಗಲೇ ಸತ್ತು ಹೋಗಿರುವಿರಿ
ನನ್ನ ಹೃದಯದಲ್ಲಿ ಬಾಯಾರಿ)

ಬೆಳಕು ಮತ್ತು ಕನಸಿನ ಬೆರಳುಗಳಿಂದ
ನೀರನ್ನು ಇಷ್ಟಿಷ್ಟೇ ನಾಜೂಕಾಗಿ ಬೇರ್ಪಡಿಸಿ
ಹನಿ ಹನಿಯನು ಸುಳಿಗಾಳಿಯಾಗಿ
ಪರಿವರ್ತಿಸುತ್ತಲೇ
ಇಲ್ಲವಾಗುತ್ತಾರೆ ಅವರು

ಸಾಯುತ್ತಾ ಅವರು ಪಿಸುಗುಡುತ್ತಾರೆ,
'ಅಲ್ಲೊಂದು ಮಹಾ ನದಿಯಿದೆ
ಅಗೋ ಅಲ್ಲಿ ಆ ಮೋಡದ ಹಿಂದೆ
ಹೌದು ನದಿ.
ಝುಳು ಝುಳು ಹರಿವ ನದಿ'
ಇಷ್ಟು ದಿನದ ದಾಹವನ್ನೆಲ್ಲಾ
ತೀರಿಸುವ ನದಿ

ನೋಡಿ
ನದಿಯ ನೆರಳು ಹೇಗೆ ಚಲಿಸುತ್ತಿದೆ
ನೆಲದ ಮೇಲೆ?

ಅಲ್ಲಲ್ಲ
ನಮ್ಮ ನಿಮ್ಮೆಲ್ಲರ ಎದೆಯ ಮೇಲೆ!



## ನಡು ಮಧ್ಯಾಹ್ನದ ಗಾಜಾ

ನಡು ಮಧ್ಯಾಹ್ನ
ನೀರಿಗಾಗಿ ಸಾಲು
ಕೂಳಿಗಾಗಿ ಸಾಲು
ಕಟ್ಟಕಡೆಗೆ ಸಾವಿಗಾಗೂ ಒಂದು ಸಾಲು

ಒಣಗಿ ಬಿರುಕು ಬಿಟ್ಟ ತುಟಿಗಳು,
ಭರವಸೆಯ ಹೆಸರ ಪಿಸುಗುಡುವ ಆತ್ಮ
ಭರವಸೆಯೋ ಬಿದ್ದು ನರಳುತ್ತಿದೆ ಉರಿವ
ಸೂರ್ಯನಡಿಯಲ್ಲಿ
ದುಃಖ ಮಾತ್ರ ಪಠಿಸುತ್ತಿದೆ ಸಹನೆಯ ಮಂತ್ರವನ್ನು

ಇವಾಂಜೆಲಿಕಲ್ ಆಸ್ಪತ್ರೆ★ಯಲ್ಲಿ,
ಎದೆ ಹಾಲಿಲ್ಲದೆ ಸೊರಗಿದ ಮಕ್ಕಳು ಕುಡಿಯುತ್ತವೆ
ಜುಲೈ ಸೂರ್ಯನ ಮೊಲೆಗಾವಿನಿಂದ
ಸೋಲಿನ ಬೆಂಕಿಯನ್ನು
ಹೊತ್ತಿ ಉರಿಯುತ್ತದೆ ಬ್ರಹ್ಮಾಂಡದ ಕನ್ನಡಿ
ಮತ್ತೆ ಕುಸಿದು ಬೀಳುತ್ತದೆ ಹಗಲ ಬೆಳಕಿನ ಗೋಡೆ
ಅಪ್ಪ ಹೇಳಿದ:
'ಮಗನೇ,ದಣಿದ ನಿನ್ನ ತಲೆಯನ್ನ
ಹೂತು ಬಿಡು ನನ್ನೆದೆಯಲ್ಲಿ
ಹೃದಯದ ತಾಳಕ್ಕೆ ಗುಂಡುಗಳೂ ಹೆದರಿ
ನಡುಗುತ್ತವೆ'
ತಲೆ ಇಟ್ಟ ಮಗನಿಗೆ
ಕಂಡಿದ್ದು ಮಾತ್ರ
ಅನಂತ ಆಕಾಶವನು ಹೊತ್ತು ಸಾಗುತ್ತಿರುವ,
ಹಿಡಿದು ನಿಲ್ಲಿಸಲು ಮಾಂಸ ಮಜ್ಜೆಗಳೇ
ಇಲ್ಲದ ತೂತು ಬಿದ್ದ ಎದೆಗೂಡು

★ ಇವಾಂಜೆಲಿಕಲ್ ಆಸ್ಪತ್ರೆ ಕ್ರಿಶ್ಚಿಯನ್ ಮಿಷನರಿಯೊಂದು ಸ್ಥಾಪಿಸಿ ನಡೆಸುತ್ತಿರುವ ಆಸ್ಪತ್ರೆ